## ಪಠ್ಯಪುಸ್ತಕ ಪರಿಷ್ಕರಣೆಯ ರಗಳೆ

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತೆಗೆದುಕೊಂಡ ತೀರ್ಮಾನಗಳು ವರ್ಷದುದ್ದಕ್ಕೂ ವಿವಾದದ ರೂಪದಲ್ಲಿ ಚರ್ಚೆಯಲ್ಲಿದ್ದವು. ಈ ಸಾಲಿನಲ್ಲಿ ಎದ್ದುಕಾಣುವಂತಹದ್ದು 'ಪಠ್ಯಪುಸ್ತಕ ಪರಿಷ್ಕರಣೆ'. ಪಠ್ಯಪುಸ್ತಕಗಳಲ್ಲಿನ ಕೆಲವು ವಿಷಯಗಳ ಬಗ್ಗೆ ಉಂಟಾದ ಆಕ್ಷೇಪಗಳ ಹಿನ್ನೆಲೆಯಲ್ಲಿ, 2021ರ ಸೆ. 8ರಂದು ಪರಿಶೀಲನಾ ಸಮಿತಿ ರಚಿಸಲಾಗಿತ್ತು. ಆ ಸಮಿತಿಗೆ, 1ರಿಂದ 10ನೇ ತರಗತಿಯ ಭಾಷಾ ವಿಷಯಗಳು, ಪರಿಸರ ಅಧ್ಯಯನ ಹಾಗೂ 6ರಿಂದ 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಗಳಲ್ಲಿ ಇರಬಹುದಾದ ಸೂಕ್ಷ್ಮ–ಸಂಕೀರ್ಣ ವಿಷಯಗಳನ್ನು ಪರಿಶೀಲಿಸಿ ಒಂದು ತಿಂಗಳಲ್ಲಿ ವರದಿ ನೀಡುವಂತೆ ಸೂಚಿಸಲಾಗಿತ್ತು.

4

ಸರ್ಕಾರದ ನಿಯಮಾವಳಿ ಪ್ರಕಾರ ಪರಿಶೀಲನಾ ಸಮಿತಿಯ ವರದಿಯನ್ನು ಸರ್ಕಾರ ಒಪ್ಪಿಕೊಂಡಲ್ಲಿ, ಅದನ್ನು ಜಾರಿಗೆ ತರಲು ಪರಿಷ್ಕರಣಾ ಸಮಿತಿಯನ್ನು ಪ್ರತ್ಯೇಕವಾಗಿ ರಚಿಸಬೇಕಾಗಿತ್ತು. ಇಲ್ಲವೇ ಪರಿಶೀಲನಾ ಸಮಿತಿಗೇ ಪರಿಷ್ಕರಣೆಯ ಹೊಣೆಯನ್ನೂ ನೀಡಿ ಹೊಸತಾಗಿ ಆದೇಶ ನೀಡಬೇಕಾಗಿತ್ತು. ಇದಾವುದನ್ನೂ ಮಾಡದೆ, ಸರ್ಕಾರದ ಅಧಿಕೃತ ಆದೇಶ ಇಲ್ಲದೆಯೇ ಪರಿಷ್ಕರಣೆ ನಡೆದು, 2022–23ನೇ ಸಾಲಿಗೆ ಪರಿಷ್ಕೃತ ಪಠ್ಯಪುಸ್ತಕಗಳನ್ನು ಮುದ್ರಿಸಿ ವಿತರಿಸುವ ಕುರಿತು ಮಾರ್ಚ್ 9ರಂದು ಶಿಕ್ಷಣ ಇಲಾಖೆ ಹೊರಡಿಸಿದ ಆದೇಶ ಕೋಲಾಹಲ ಉಂಟುಮಾಡಿತು. ಪಠ್ಯಪುಸ್ತಕಗಳನ್ನು ಕೇಸರೀಕರಣಗೊಳಿಸಲಾಗುತ್ತಿದೆ ಎನ್ನುವ ಮಾತು ಕೇಳಿಬಂತು. ಕೆಲವು ಲೇಖಕರು ಪಠ್ಯಪುಸ್ತಕಗಳಿಂದ ತಮ್ಮ ಪಠ್ಯವನ್ನು ಹಿಂತೆಗೆದುಕೊಳ್ಳುವ 'ಪಠ್ಯ ವಾಪಸಾತಿ'ಯೂ ನಡೆಯಿತು. ಸಾರ್ವಜನಿಕ ಪ್ರತಿರೋಧದ ಮೇರೆಗೆ, ಸರ್ಕಾರ ಕೆಲವು ಪಠ್ಯಗಳನ್ನು ಪಠ್ಯಪುಸ್ತಕಗಳಿಗೆ ಸೇರಿಸಿ ವಿವಾದವನ್ನು ತಿಳಿಗೊಳಿಸುವ ಪ್ರಯತ್ನ ಮಾಡಿತು. ಮಕ್ಕಳ ಹಿತಾಸಕ್ತಿಗಿಂತಲೂ ರಾಜಕೀಯ ಹಿತಾಸಕ್ತಿಗಳೇ ಮೇಲುಗೈ ಸಾಧಿಸಿದ್ದು ಪಠ್ಯಪುಸ್ತಕ ಪರಿಷ್ಕರಣೆ ಪ್ರಕರಣದಲ್ಲಿ ಎದ್ದುಕಾಣಿಸಿದವು.



## ಕರಗಿದ ಕೊರೊನಾ ಕಾರ್ಮೋಡ

ಎರಡು ವರ್ಷಗಳಿಗೂ ಹೆಚ್ಚು ಕಾಲ ಇಡೀ ವಿಶ್ವವನ್ನು ಕಂಗೆಡಿಸಿದ್ದ ಕೊರೊನಾ ಬಿಕ್ಕಟ್ಟು 2022ರಲ್ಲಿ ತಿಳಿಯಾಯಿತು. ಇಡೀ ಜಗತ್ತು ನಿಟ್ಟುಸಿರುಬಿಟ್ಟಿತು. ಕೊರೊನಾ ಲಾಕ್‌ಡೌನ್ ಸಮಯದಲ್ಲಿ ಮಕ್ಕಳೊಂದಿಗೆ ಹೆಚ್ಚಿನ ತೊಂದರೆ ಅನುಭವಿಸಿದ್ದು ಜನಸಾಮಾನ್ಯರು.

5

ರೋಗಭೀತಿಯ ಜೊತೆಗೆ, ದುಡಿಮೆಯ ಅವಕಾಶಗಳೂ ಮುಚ್ಚಿಹೋಗಿ ಜನಸಾಮಾನ್ಯರು ಪಡಿಪಾಟಲು ಅನುಭವಿಸುವಂತಾಯಿತು. ಆರ್ಥಿಕತೆಗೆ ಬಿದ್ದ ಪೆಟ್ಟಿನಿಂದ ದೇಶ ಇನ್ನೂ ಚೇತರಿಸಿಕೊಂಡಿಲ್ಲ. ಆದರೂ, ಕೊರೊನಾ ಜೊತೆಗೆ ಹೊಂದಾಣಿಕೆಯ ಬದುಕು ಸಾಧ್ಯ ಎನ್ನುವಂತಾದುದೇ ಜನರಿಗೆ ದೊಡ್ಡ ಸಮಾಧಾನದ ಸಂಗತಿ. ಶಾಲಾಕಾಲೇಜುಗಳ ಬಾಗಿಲು ತೆರೆದು, ಮಕ್ಕಳು ಎಂದಿನಂತೆ ಶಾಲೆಗೆ ಹೋಗಿಬರುವಂತಾಗಿರುವುದು 2022ರ ಬಹುದೊಡ್ಡ ಧನಾತ್ಮಕ ಸಂಗತಿಗಳಲ್ಲೊಂದು. ಎರಡು ಅಮೂಲ್ಯ ಶೈಕ್ಷಣಿಕ ವರ್ಷಗಳು ಕೊರೊನಾ ಬಾಧೆಗೆ ಒಳಗಾದುದು ಮಕ್ಕಳ ಕಲಿಕೆಯ ಮೇಲೆ ಗಂಭೀರ ಪರಿಣಾಮ ಉಂಟುಮಾಡಿದೆ. ಆ ಹಿನ್ನಡೆಯನ್ನು ತುಂಬುವ ಉದ್ದೇಶದಿಂದ 2022–23ನೇ ಶೈಕ್ಷಣಿಕ ವರ್ಷವನ್ನು 'ಕಲಿಕಾ ಚೇತರಿಕೆ ವರ್ಷ'ವೆಂದು ರಾಜ್ಯ ಸರ್ಕಾರ ಪ್ರಕಟಿಸಿದೆ.

ಕೊರೊನಾ ದವಡೆಯಿಂದ ಭಾರತ ಸೇರಿದಂತೆ ವಿಶ್ವದ ಬಹುತೇಕ ಭಾಗಗಳು ಹೊರಬಂದು ಚೇತರಿಸಿಕೊಂಡಿದ್ದರೂ, ಕೋವಿಡ್ ಹತ್ತಿಕ್ಕಲು ಚೀನಾ ಇನ್ನೂ ಹೆಣಗುತ್ತಿದೆ. ಸರ್ಕಾರದ ಕಠಿಣ ಲಾಕ್‌ಡೌನ್ ನೀತಿಯ ಕುರಿತು ಚೀನಾದ ನಾಗರಿಕರು ರಸ್ತೆಗಳಿಗಿಳಿದು ಪ್ರತಿಭಟಿಸಿದ್ದರು. ಸದ್ಯಕ್ಕೆ ಲಾಕ್‌ಡೌನ್ ಸಡಿಲಿಸಲಾಗಿದ್ದರೂ, ಕೊರೊನಾ ಭೀತಿಯಿಂದ ಚೀನಾ ಮುಕ್ತವಾಗಿಲ್ಲ. ವೈರಸ್ ಬಾಧೆಯ ಆತಂಕದಿಂದ ಜಗತ್ತು ಇನ್ನೂ ಪೂರ್ಣಪ್ರಮಾಣದಲ್ಲಿ ಮುಕ್ತವಾಗಿಲ್ಲ ಎನ್ನುವುದಕ್ಕೆ ಚೀನಾದಲ್ಲಿನ 'ಕೋವಿಡ್ ಸಂಘರ್ಷ' ಸೂಚನೆಯಂತಿದೆ.




## ರಾಜಕಾರಣದ ದಾಳವಾದ ಹಿಜಾಬ್

6

ಕರಾವಳಿಯ ಕೆಲವು ಕಾಲೇಜುಗಳಲ್ಲಿ ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರಿಗೆ ತರಗತಿಗಳಿಗೆ ಪ್ರವೇಶ ನಿರಾಕರಿಸುವ ಮೂಲಕ ಆರಂಭವಾದ 'ಹಿಜಾಬ್ ವಿವಾದ' ಕ್ರಮೇಣ ರಾಜ್ಯವ್ಯಾಪಿಯಾಗಿ, ಈಗ ಸುಪ್ರೀಂ ಕೋರ್ಟ್ ಆವರಣದಲ್ಲಿದೆ. ಹಿಜಾಬ್ ಧರಿಸಲು ಅವಕಾಶ ಕೊಟ್ಟರೆ ಶಾಲೆಗೆ ಕೇಸರಿ ಶಾಲು ಧರಿಸಿ ಬರುತ್ತೇವೆಂದು ಕರಾವಳಿಯ ಕೆಲವು ಕಾಲೇಜುಗಳಲ್ಲಿ ಹುಡುಗರು ಪಟ್ಟುಹಿಡಿದದ್ದು, ರಾಜ್ಯದ ವಿವಿಧ ಭಾಗಗಳಿಗೂ ಹಬ್ಬಿತು. 'ಹಿಜಾಬ್ ವರ್ಸಸ್ ಕೇಸರಿ ಶಾಲು' ನಡುವಿನ ಸಂಘರ್ಷ ರಾಜಕೀಯ ಪ್ರಕರಣವಾಗಿಯೂ ರೂಪುಗೊಂಡಿತು. ಹಿಜಾಬ್ ತೆಗೆಯಲು ನಿರಾಕರಿಸಿದ ಹೆಣ್ಣುಮಕ್ಕಳನ್ನು ಶಾಲೆಗಳಿಂದ ಹೊರಗೆ ನಿಲ್ಲಿಸಿದ ಪ್ರಕರಣಗಳೂ ನಡೆದವು. ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶಗಳನ್ನು ನಿರಾಕರಿಸಲಾಯಿತು. ಸಮವಸ್ತ್ರ ಸಂಹಿತೆ ಕಾರಣದಿಂದಾಗಿ, ಶಾಲಾ ಕಾಲೇಜುಗಳಿಗೆ ಹಿಜಾಬ್ ಧರಿಸಿ ಬರಲು ಅವಕಾಶವಿಲ್ಲ ಎನ್ನುವ ರಾಜ್ಯ ಸರ್ಕಾರದ ವಾದವನ್ನು ಹೈಕೋರ್ಟ್ ಪುರಸ್ಕರಿಸಿತು. ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿ, ವಿಚಾರಣೆಗಳು ನಡೆದ ನಂತರ, ಒಮ್ಮತದ ತೀರ್ಮಾನಕ್ಕೆ ಬರುವುದು ನ್ಯಾಯಪೀಠಕ್ಕೆ ಸಾಧ್ಯವಿಲ್ಲ. ನ್ಯಾಯಪೀಠದಲ್ಲಿದ್ದ ಇಬ್ಬರು ನ್ಯಾಯಮೂರ್ತಿಗಳು ಭಿನ್ನ ತೀರ್ಪುಗಳನ್ನು ನೀಡಿದ್ದರಿಂದಾಗಿ, ಪ್ರಕರಣ ಮುಖ್ಯ ನ್ಯಾಯಮೂರ್ತಿಗಳ ಪೀಠಕ್ಕೆ ವರ್ಗಾವಣೆಯಾಗಿದೆ. ಮುಂದಿನ ತೀರ್ಮಾನದವರೆಗೂ ಹೈಕೋರ್ಟ್ ತೀರ್ಪಿನ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ನ್ಯಾಯಪೀಠ ಹೇಳಿದೆ.